ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ

Spl. NDPS 8/2020

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಗಿರೀಶ್ ಎಸ್ ಹೆಚ್ | ಪಿ.ಡಬ್ಲ್ಯೂ. | 6 |
| ತಂದೆಯ ಹೆಸರು | : | ಹನುಮಂತಪ್ಪ | ಸಿ.ಡಬ್ಲ್ಯೂ. | 17 |
| ವಯಸ್ಸು | : | 38 ವರ್ಷ | | |
| ಉದ್ಯೋಗ | : | ಲೋಕಾಯುಕ್ತ ಪೋಲೀಸ್ ಠಾಣಾ ದಾವಣಗೆರೆ, ಪೋಲೀಸ್ ಪೇದೆ. | | |
| ವಾಸ ಸ್ಥಳ | : | ಆವರಗೆರೆ, ದಾವಣಗೆರೆ. | | |

ದಿ.01.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)** ಃ

1. 2015 ರಿಂದ 2022 ರವರೆಗೆ ನಾನು ದಾವಣಗೆರೆ ಕೆಟಿಜೆ ನಗರ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 27.12.2019 ರಂದು ಚಾಸಾ.18 ರವರು ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಗಾಂಜಾವನ್ನು 2 ನೇ ಜೆ.ಎಂ.ಎಫ್.ಸಿ ನ್ಯಾಯಾಲಯ, ದಾವಣಗೆರೆಯಲ್ಲಿ ಇನ್ವೆಂಟರಿ ಮಾಡಿಸಲು ಬಂದಿದ್ದೇವು. ಇನ್ವೆಂಟರಿ ಮಾಡಿಸುವ ಸಂದರ್ಭದಲ್ಲಿ ನಾನು ಫೋಟೋ ತೆಗೆದಿರುತ್ತೇನೆ. ಸದರಿ ಫೋಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ಆರು ಫೋಟೋಗಳನ್ನು **ನಿಪಿ.25** ರಿಂದ **ನಿಪಿ.30** ಎಂದು ಗುರುತಿಸಲಾಯಿತು.

3. ಸದರಿ ಫೋಟೋಗಳನ್ನು ನನ್ನ ಮೊಬೈಲ್ ನಲ್ಲಿ ತೆಗೆದಿರುತ್ತೇನೆ. ಸದರಿ ಫೋಟೋಗಳನ್ನು ಪ್ರಿಂಟ್ ಹಾಕಿಸಿ ತನಿಖಾಧಿಕಾರಿಗೆ ಕೊಟ್ಟಿರುತ್ತೇನೆ. ಫೋಟೋಗಳನ್ನು ತೆಗೆದು ಪ್ರಿಂಟ್ ತೆಗೆಸಿದ ಬಗ್ಗೆ ಕಲಂ 65(ಬಿ) ಸಾಕ್ಷ್ಯ ಅಧಿನಿಯಮ ರಡಿಯಲ್ಲಿ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು **ನಿಪಿ.31** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.31(ಎ)** ಎಂದು ಗುರುತಿಸಲಾಯಿತು. ಸದರಿ ಫೋಟೋಗಳನ್ನು ಸಿಡಿ ಗೆ ಅಳವಡಿಸಿರುತ್ತೇನೆ. ಸದರಿ ಸಿಡಿ ಯನ್ನು **ನಿಪಿ.32** ಎಂದು ಗುರುತಿಸಲಾಯಿತು.

4. ಇನ್ವೆಂಟರಿ ಸಮಯದಲ್ಲಿ ಸ್ಯಾಂಪಲ್ ಗಾಗಿ ತೆಗೆದ ಮಾದರಿ ಗಾಂಜಾವನ್ನು ಎಂ.ಓ.1, ಎಂ.ಓ.5 ಮತ್ತು ಎಂ.ಓ.6 ಎಂದು ಈಗಾಗಲೇ ಗುರುತಿಸಲಾಗಿದೆ.

**ಪಾಟೀ ಸವಾಲು : ಶ್ರೀ ಕೆ.ಎಚ್.ವಿ, ವಕೀಲರಿಂದ ಆರೋಪಿತರ ಪರವಾಗಿ** :

5. ಇನ್ವೆಂಟರಿಗೆ ತಂದ ಮಾಲು ಯಾವ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾಗಿತ್ತು ಎಂದು ನನಗೆ ಮಾಹಿತಿ ಇದೆ. ಇನ್ವೆಂಟರಿಗೆ ತಂದ ಮಾಲುಗಳ ಮೇಲೆ ಸಹಿ ಮಾಡಿರುವ ಸಾಕ್ಷಿದಾರರ ಹೆಸರು ನನಗೆ ಗೊತ್ತಿಲ್ಲ. ಚಾಸಾ.18 ರವರ ಜೊತೆ ನಾನು ಇನ್ವೆಂಟರಿ ಮಾಡಿಸಲು ಬಂದೆ. ಇನ್ವೆಂಟರಿ ಮಾಡುವ ಪೂರ್ವದಲ್ಲಿ ಸ್ಥಳದಲ್ಲಿ ವಶಪಡಿಸಿಕೊಳ್ಳಲಾಗಿದೆ ಎನ್ನುವ ಗಾಂಜಾ ವಸ್ತುಗಳನ್ನು ವಶಪಡಿಸಿಕೊಳ್ಳುವ ಕಾಲಕ್ಕೆ ಸಹಿ ಮಾಡಿರುವ ಸಾಕ್ಷಿದಾರರು ಹೆಸರು ನನಗೆ ಗೊತ್ತಿಲ್ಲ.

**ಮರು ವಿಚಾರಣೆ** : ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ .

(ರಾಜೇಶ್ವರಿ ಎನ್. ಹೆಗಡೆ)

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.